697 (540) ಶ್ರೀ ಮಾಮನಿ ವಿಶ್ವನಾಥ ಕರಿಬಸಪ್ಪ – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯಲ್ಲಿ ಬೀಜ ಸಂಸ್ಕರಣ ಘಟಕ ಇರದ ಕಾರಣ ಇದೇ ಜಿಲ್ಲೆಯ ಸೌದತ್ತಿ ಎ.ಪಿ.ಎಂ.ಸಿ.ಯಲ್ಲಿ ಬೀಜ ಸಂಸ್ಕರಣ ಘಟಕ ಮಂಜೂರಿ ಕುರಿತು 12 ಗುಂಟೆ ನಿವೇಶನ ವಹಿಸಿ ಕೊಟ್ಟ ಪ್ರಸ್ತಾವನೆಯನ್ನು 1998 ರಲ್ಲಿ ಸಲ್ಲಿಸಿದ್ದಾಗ್ಯೂ ಈವರೆಗೆ ಮಂಜೂರಿಯಾಗದಿರುವುದಕ್ಕೆ ಕಾರಣಗಳೇನು ;

ಆ) ಈ ಬೀಜ ಸಂಸ್ಕರಣ ಘಟಕ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ಮತ್ತು ಆ) ಸದರಿ ನಿವೇಶನವನ್ನು ಬೀಜ ದಾಸ್ತಾನು ಮತ್ತು ಮಾರಾಟ ಕೇಂದ್ರ ಹಾಗೂ ಕಚೇರಿ ನಿರ್ಮಾಣಕ್ಕೆ ಮಾತ್ರ ಪಡೆದಿರುವುದರಿಂದ ಸಂಸ್ಕರಣಾ ಘಟಕ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

698 (541) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006-07ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಯಾಗಿದ್ದು, ಸಮಿತಿ ರಚನೆಯಾಗದೇ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಆರಾಧನಾ ಯೋಜನಾ ಸಮಿತಿ ರಚನೆ ಕುರಿತು ಸರ್ಕಾರದ ಕ್ರಮ ಏನು ;

ಇ) ಆರಾಧನಾ ಯೋಜನೆಯ ಅನುದಾನ ವಿತರಿಸಲು ಪರ್ಯಾಯ ವ್ಯವಸ್ಥೆ ಮಾಡಲು ಸರ್ಕಾರದ ಕ್ರಮ ಏನು ?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) :

ಅ) 224 ವಿಧಾನ ಸಭಾ ಕ್ಷೇತ್ರಗಳಲ್ಲಿ ಈಗಾಗಲೇ 105 ವಿಧಾನ ಸಭಾ ಕ್ಷೇತ್ರಗಳಿಗೆ ಆರಾಧನಾ ಸಮಿತಿ ರಚಿಸಲಾಗಿದೆ.